ಮಗನ ಉಪಚಾರಕ್ಕೇಂತ ನಿಂತಿದ್ದವ ಅಲ್ಲೇ ಕುಸಿದು ಬಿದ್ದು ಹೋಗಿಬಿಟ್ನಂತೆ ರಾಯರೇ!... ಅಂತ ಹೇಳಿ ಅವರನ್ನು ಅರಂಟಿ ಹಿಡ್ಕೊಂಡ್ರು ಅತ್ತರು. ರಾಯರು ಕುಸಿದು ಕೂತರು. ಭಾಗವತರು ಮಂಗಲ ಹಾಡ್ತಿದ್ರು.

'ಈಗಿನ ಕಾಲದ ಮಕ್ಕಳಿಗೆ ಹೇಳಿ ಪ್ರಯೋಜನ ಇಲ್ಲ ಮಾರ್ರೆ. ಯೆಂತ ಹೇಳಿದ್ರೂ ಅಪಾರ್ಥ ಮಾಡಿಕೊಳ್ಳುತ್ತವೆ. ನೀವೇ ಹೇಳಿ ಹಬ್ಬದ ದಿವಸ ಆದ್ರೂ ಬೇಗ ಬನ್ನಿ ಅಂತ ಹೇಳಿದ್ದು ತಪ್ಪಾ ಜೋಯಿಸರೇ?' ಅಂತ ಫೋನು ಮಾಡಿ ಮಾರುತಿ ರಾಯರು ಗೋವಿಂದ ಜೋಯಿಸರ ಹತ್ತಿರ ಬೇಜಾರು ಮಾಡಿಕೊಂಡಿದ್ದರು. ಆ ಕಡೆಯಿಂದ ಅವರು 'ಸಾ, ಯೆಂತ ಹೇಳುದು ರಾಯರೇ ಅವಕ್ಕೆ ಬಿಸಿ ರಕ್ತ. ನಮಿಗೆ ಪ್ರಾಣ ಸಂಕಟ. ಹಬ್ಬಕ್ಕೆ ಬರ್ತೇವೆ ಅಂತ ಹೇಳಿದಾಗ ಬೇಡ ಅಂತ ಹೇಳ್ಳಿಕ್ಕೆ ಆಗ್ಲಿಲ್ಲ. ಆದ್ರೆ ನಿನ್ನೆ ರಾತ್ರಿ ಫೋನು ಮಾಡಿ ಯಾವ ಬಸ್ಸಲ್ಲಿ ಸಾ ಟಿಕೇಟು ಸಿಗ್ಲಿಲ್ಲ. ನಾನು ಸಾ ಅಶ್ವಿನ್ ಸಾ ಒಟ್ಟಿಗೆ ಬೈಕಲ್ಲಿ ಬರ್ತೇವೆ ಅಂತ ಹೇಳಿದಾಗ ನಂಗೆ ಹೃದಯವೇ ಬಾಯಿಗೆ ಬಂದ ಹಾಗೆ ಆಯಿತು ಮಾರಾಯರೆ. ಎಲ್ಲಿ ಬೆಂಗ್ಳೂರು ಎಲ್ಲಿ ನಮ್ಮ ಊರು. ನಾನ್ನೂರೈವತ್ತು ಕಿಲೋಮೀಟರು ಅಂದ್ರೆ ಕುಶಾಲಾ ಮಾರ್ರೆ. ಬೇಡ ಅಂತ ಹೇಳಿದ್ರೆ ಅವಕ್ಕೆ ಬೇಜಾರು. ಹಾಂ ಬನ್ನಿ ಅಂತ ಹೇಳಿದ್ರೆ ಅವರು ಬಂದು ತಲುಪುವ ತನಕ ನಮಿಗೆ ಇಲ್ಲಿ ಜೀವ ತುಪು ತುಪು ಹೇಳ್ತದೆ' ಅಂತ ಅವರು ಹೇಳಿದ್ರು. ಚೌತಿಯ ದಿವಸ ಗಣಹೋಮಕ್ಕೆ ಅಂತ ಕೂತಿದ್ದ ಜೋಯಿಸರು ಆಗಲೇ ಎರಡೆರಡು ಸರ್ತಿ ಮಗನಿಗೆ ಫೋನು ಮಾಡಿ ಆಗಿತ್ತು. ಒಂದು ಸರ್ತಿ ನಾವು ಹಾಸನದ ಹತ್ರ ಇದ್ದೇವೆ ಅಂತಲೂ, ಮತ್ತೊಂದು ಸರ್ತಿ ನಾವು ಘಟ್ಟ ಇಳೀತಾ ಇದ್ದೇವೆ ಅಂತಲೂ ಹೇಳಿದಿದ್ದರು. ಆಮೇಲೆ ಸುಮಾರು ಹೊತ್ತಿಂದ ಫೋನೇ ಇಲ್ಲ. ಹಾಗಾಗಿ ಇಬ್ಬರಿಗೂ ಮಂಡೆ ಬಿಂಗ್ರಿ ಆಗಿತ್ತು. ಗಣಹೋಮಕ್ಕೆ ಕೂತಿದ್ದ ಇಬ್ಬರು ಸಾ ಕೂತ್ಕೊಳ್ಳುದು ಏಳುದು ಮಾಡ್ತಿದ್ರು.

ಮಾರುತಿರಾಯರು, ಗೋವಿಂದ ಜೋಯಿಸರು ಅಕ್ಕಪಕ್ಕದ ಮನೆಯವರು. ಇಬ್ಬರೂ ತಾಳಮದ್ದಳೆಯ ಅರ್ಥಧಾರಿಗಳು. ಒಂದು ದಿವಸ ಸಾ ಪುರುಸೊತ್ತು ಇಲ್ಲದ ಹಾಗೆ ದುಡೀತಾ ಇದ್ದವರು. ಚೌತಿಯ ದಿವಸವೂ ಅವರಿಗೆ ದೂರದ ಪಾಂಬೆಟ್ಟು ಎಂಬ ಊರಿನಲ್ಲಿ ರಾಯರಿಗೆ ಸಂಮ್ಮಾನ ನಂತ್ರ ತಾಳಮದ್ದಳೆ ಎಲ್ಲ ಇತ್ತು. ಹಾಗೆ ಮನೆಯಲ್ಲಿ ಗಣಹೋಮ ಮುಗಿಸಿ ಹಬ್ಬದ ಊಟ ಮಾಡಿ ಹೊರಡುವವರಿದ್ದರು. ಆದರೆ ಇಬ್ಬರ ಮಕ್ಕಳೂ ಬೈಕಿನಲ್ಲಿ ಬೆಂಗಳೂರಿನಿಂದ ಬರುವವರಿದ್ದ ಕಾರಣದಿಂದ ಅವರಿಬ್ಬರು ಸಾ ಗಾಬರಿ ಆಗಿದ್ದರು. ಇಬ್ಬರಿಗೂ ಒಬ್ಬೊಬ್ಬರೇ ಗಂಡು ಮಕ್ಕಳು. ಅದರಲ್ಲಿಯೂ ಮಾರುತಿ ರಾಯರದು ಒಂದು ವಿಚಿತ್ರ ಕತೆ.

ಮಾರುತಿರಾಯರು ಸಂಬಂಧದಲ್ಲಿಯೇ ನೋಡಿದ್ದ ಹೆಣ್ಣನ್ನು ಮದುವೆ ಆದದ್ದು. ಉಷಾ ಅಂತ ಅವಳ ಹೆಸರು. ಮದುವೆ ಆಗುವ ಸಂದರ್ಭದಲ್ಲಿಯೇ ಮಾರುತಿರಾಯರು ನಂಗೆ ಕಂಡಾ ಬಟ್ಟೆ ಆಸ್ತಿ, ಐಶ್ವರ್ಯ ಇಲ್ಲ. ಇರೂದು ಒಂದು ಸ್ವಲ್ಪ ಗದ್ದೆ ತೋಟ ಅಷ್ಟೆ. ದಿನಾ ಆಟ, ತಾಳಮದ್ದಲೆ ಅಂತೆಲ್ಲ ಊರೂರು ತಿರುಗುವವ ನಾನು. ನಾಳೆ ದಿನ ಮದುವೆ ಆಗಿ ಮನಗೆ ಬಂದು ಅದಿಲ್ಲ ಇದಿಲ್ಲ ಅಂತೆಲ್ಲ ಪಿರಿ ಪಿರಿ ಹೇಳಬಾರದು. ಇದ್ದದ್ರಲ್ಲಿ ಹೊಂದಿಕೊಂಡು ಹೋಗೂದಾದ್ರೆ ನನ್ನನ್ನು ಮದುವೆ ಆಗು ಅಂತ ಹೇಳಿದಿದ್ರು. ಆಗ ಪೆದ್ದು ಪೆದ್ದರ ಹಾಗೆ ತಲೆ ಆಡಿಸಿದ್ದ ಅವಳು ಮದುವೆ ಆಗಿ ಕೆಲವೇ ದಿನಗಳಲ್ಲಿ ಅದಿಲ್ಲ ಇದಿಲ್ಲ ಹಾಗೆ ಹೀಗೆ ಅಂತ ಸುರು ಮಾಡಿದ್ಲು. ಹಾಗೆ ಹೇಳಿಕ್ಕೆ ಒಂದು ಕಾರಣ ಇತ್ತು. ಅದು ಯೆಂತದು ಅಂದ್ರೆ ಗೋವಿಂದ ಜೋಯಿಸರ ಅಣ್ಣ ತ್ರಿವಿಕ್ರಮ ಜೋಯಿಸರು ಮಾರುತಿರಾಯರ ಪಕ್ಕದ ಊರಿನವರು. ಹೆಚ್ಚು ಕಡಿಮೆ ಮಾರುತಿರಾಯರದ್ದೇ ವಯಸ್ಸು. ಮಿರಿ ಮಿರಿ ಮಿಂಚುವ ವಜ್ರದ ಒಂಟಿ, ಕೈಗೆ ನಾಲ್ಕೈದು ಉಂಗುರಗಳು, ಕುತ್ತಿಗೆಗೆ ತುಳ್ಸೀ ಮಣಿ ಸರ ಚಿನ್ನದ್ದು ಅದ್ರಲ್ಲಿ ಒಂದೆರಡು ಪೆಂಡೆಂಟುಗಳು, ಸಿಲ್ಕ್ ಜುಬ್ಬಾ ಎಲ್ಲ ಹಾಕ್ಕೊಂಡು ಸ್ಟೇಜಲ್ಲಿ ಅರ್ಥ ಹೇಳಿಕ್ಕೆ ಕೂತ್ರೆ ಎಲ್ರೂ ಅವ್ರನ್ನೇ ಬಿಟ್ಟ ಕಣ್ಣು ಬಿಟ್ಟ ಬಾಯಿಂದ ನೋಡ್ತಿದ್ರು. ಅರ್ಥ ಹೇಳೂದ್ರಲ್ಲೂ ಹಾಗೇ ಎದುರಿಗೆ ಇದ್ದವನನ್ನು ಬಡ್ದೇ ತೆಗೀತಿದ್ರು. ಖಳ ಪಾತ್ರಗಳೂಂತಾದ್ರೆ ಮುಗೀತು. ಎದುರಿನ ಪಾತ್ರದವ ಕಕ್ಕಾಬಿಕ್ಕಿ ಆಗ್ಬೇಕು ಹಾಗೆ ಮಾಡ್ತಿದ್ರು. ಹಾಗಾಗಿ ತ್ರಿವಿಕ್ರಮ ಜೋಯಿಸರ ಅರ್ಥಕ್ಕೆ ಕಂಡಾ ಬಟ್ಟೆ ಡಿಮಾಂಡ್ ಇತ್ತು.

ಅವ್ರದ್ದು ಒಂದು ವೀಕ್ನೆಸ್. ಅದು ಯೆಂತದೂ ಅಂದ್ರೆ ಹುಡುಗಿಯರ ಹುಚ್ಚು. ಮನೆಯಲ್ಲಿ ಚಿನ್ನದಂಥ ಹೆಂಡತಿ ಇದ್ರೂ ಸಾ ತಾನು ಹೋದ ಊರಲ್ಲೆಲ್ಲ ಹೆಣ್ಣು ಮಕ್ಕಳು ಸಿಗ್ತಾರಾ ಅಂತ ನೋಡ್ತಿದ್ರು. ಅರ್ಥ ಹೇಳುವಾಗ ಹೆಂಗಸರನ್ನೇ ನೋಡುದು, ಅವರ ಕಡೆಗೇ ಮುಖ ಮಾಡಿ ಕೂತ್ಕೊಳ್ಳುದು ಎಲ್ಲ ಮಾಡ್ತಿದ್ರು. ಪ್ರಸಂಗ ಮುಗ್ದ ನಂತ್ರ ಯಾರಾದ್ರೂ ಹೆಂಗಸರು 'ತುಂಬ ಚೆಂದ ಅರ್ಥ ಹೇಳಿದ್ರಿ ಜೋಯಿಸರೇ' ಅಂತ ಹೇಳಿದ್ರೆ ಸಾಕು ಅವ್ರ ಕೈ ಮೈ ಎಲ್ಲ ಮುಟ್ಟಿ ಮುಟ್ಟಿ ಮಾತಾಡ್ತಿದ್ರು. ಇದರಿಂದ ಕೆಲವು ಹೆಂಗಸರಿಗೆ ಅಸಹ್ಯ ಆದರೆ ಎಷ್ಟೋ ಹೆಂಗಸರು ಬೇಕಂತಲೇ ಅವರ ಹತ್ರ ಸೇರ್ತಿದ್ರು.

ಒಂದು ಸರ್ತಿ ಕುದುರೆಬೆಟ್ಟಲ್ಲಿಯೇ ತಾಳಮದ್ದಳೆ. ವಾಲಿವಧೆ ಪ್ರಸಂಗ. ಜೋಯಿಸರದ್ದು ವಾಲಿ. ಮಾರುತಿರಾಯರದ್ದು ರಾಮ. ಅವತ್ತು ತಾಳಮದ್ದಳೆಗೆ ಹೆಂಡತಿಯನ್ನು ಸಾ ಕರ್ಕೊಂಡು ಹೋಗಿದ್ದಿದ್ರು. ಅದೇ ಮೊದಲ ಸಲ ಜೋಯಿಸರು ಎದುರಿನ ಸಾಲಿನಲ್ಲಿ ಕೂತಿದ್ದ ಉಷಾಳನ್ನು ನೋಡಿದ್ದು. ಮೈ ಕೈ ತುಂಬಿಕೊಂಡು ದಂತದ ಗೊಂಬೆಯ ಹಾಗಿದ್ದ ಅವಳಿಂದ ಕಣ್ಣು ತೆಗೀಲೇ ಇಲ್ಲ. ರಾಮನ ಎದುರಲ್ಲಿ ವಾದ ಮಾಡುವಾಗ ಒಂದು ಹಂತದಲ್ಲಿ ವಿಪರೀತಕ್ಕೆ ತೆಕ್ಕೊಂಡು ಹೋದ್ರು. ಕಾಡಿನಲ್ಲಿ ಇರಬೇಕಾಗಿದ್ದ ರಾಮ ನೀನು ನಾಡಿಗೆ ಬಂದದ್ದು ಸರಿಯೇ? ಮರೆಯಲ್ಲಿ ನಿಂತು ಬಾಣ ಹೊಡೆದದ್ದು ಸರಿಯೇ? ಇಂಥ ಪ್ರಶ್ನೆಗಳಿಗೆ ಬೇರೆ ಕಡೆ ತಾಳಮದ್ದಳೆಗಳಲ್ಲಿ ಸಿದ್ಧ ಉತ್ತರ ಕೊಡುತ್ತಾನೆ ರಾಮನ ಪಾತ್ರಧಾರಿ. ನಂತರ ಅಲ್ಲಿಂದ ಪ್ರಸಂಗ ಮುಂದುವರಿಯುತ್ತದೆ. ಆದರೆ ಅವತ್ತು ಅಲ್ಲಿ ಹಾಗಾಗಲಿಲ್ಲ. ಜೋಯಿಸರು ಪಟ್ಟು ಬಿಡದೆ ಅತಿ ವಾದಗಳನ್ನು ಮಂಡಿಸಿದ್ರು. ಮಾರುತಿರಾಯರಿಗೆ ಇದು ತಾಳಮದ್ದಳೆಯ ವ್ಯಾಪ್ತಿ ಮೀರಿತು ಅಂತ ಅನಿಸಿತು. ನನಗೆ ಇಂಥ ಅರ್ಥಗಳಿಗೆ ಉತ್ತರ ಕೊಡಲು ಬರುವುದಿಲ್ಲ ಅಂತ ಹೇಳಿ ಸಭೆಗೆ ಕೈ ಮುಗಿದು ಪ್ರಸಂಗದಿಂದ ಅರ್ಧಕ್ಕೇ ಎದ್ದರು. ಜನ ಎಲ್ಲ ಹೋ ಅಂದ್ರು.

ಅವತ್ತು ಉಷಾ ಗಂಡನನ್ನು ಸಮಾ ಬೈರಾಸ್ ಮಾಡಿದ್ಲು. (ಹಾಸ್ಯ ಮಾಡು, ತಮಾಷೆ ಮಾಡು, ಹಿಂಡು ಇತ್ಯಾದಿ ಅರ್ಥಗಳಿವೆ.) ನಿಮಗಿಂತ ಜೋಯಿಸರೇ ವಾಸಿ. ಎಷ್ಟು ಚೆಂದ ಅರ್ಥ ಹೇಳ್ತಾರೆ. ರೂಪದಲ್ಲಿ ಗುಣದಲ್ಲಿ ಎಲ್ಲದ್ರಲ್ಲೂ ಅವರೇ ನಿಮಗಿಂತ ವಾಸಿ. ನಿಮ್ಮನ್ನು ಮದುವೆ ಆಗೂದಕ್ಕಿಂತ ಅವ್ರನ್ನೇ ಮದುವೆ ಆಗ್ತಿದ್ರೆ ಎಷ್ಟೋ ವಾಸಿ ಆಗ್ತಿತ್ತಾ ಏನ. ಅವರಿಗೆ ಆಸ್ತಿ, ಪ್ರಸಿದ್ಧಿ, ಕೀರ್ತಿ ಎಲ್ಲ ಉಂಟು. ನಿಮಗೆ ಯೆಂತ ಉಂಟು ಮಣ್ಣಾಂಗಟ್ಟಿ? ಅಂತೆಲ್ಲ ಹೇಳಿಕ್ಕೆ ಸುರು ಮಾಡಿದ್ಲು. ರಾಯರಿಗೆ ತಾಳ್ಮೆ ಮೀರಿದಾಗ ಒಂದು ದಿವಸ ಕೆನ್ನೆಗೆ ರಪ್ಪ ಬಾರಿಸಿದ್ದಿದ್ರು. ಅವನಿಗೆ ಮದುವೆ ಆಗಿ ಹೆಂಡತಿ ಇದ್ದಾಳೆ ಅಂತ ನೆನಪಿಟ್ಟುಕೋ. ಮದುವೆಗೆ ಮೊದ್ಲೇ ನಿಂಗೆ ನಾನು ಹೇಳಿದ್ದೆ ನನ್ನ ಸಮಸ್ಯೆಯ ಬಗ್ಗೆ. ಆದ್ರೂ ಸಾ ಒಪ್ಪಿ ಮದುವೆ ಆಗಿದ್ದೀ. ಆದ್ರೆ ಈಗ ಹೀಗೆ ಮಾತಾಡ್ತಿ. ನಾಚಿಕೆ ಆಗೂದಿಲ್ವಾ? ಅಂತ ಬೈದಿದ್ರು. ಆದ್ರೆ ಅವಳ ಕಿವಿಗೆ, ಬುದ್ದಿಗೆ ಅದೆಲ್ಲ ನಾಟ್ಲೇ ಇಲ್ಲ. ಯೆಂತ ಇದ್ರೂ ಜೋಯಿಸರ ಬಗ್ಗೆಯೇ ಯೋಚನೆ ಮಾಡ್ತಿದ್ಲು. ಅವರ ಅರ್ಥ ಎಲ್ಲಿ ಇದ್ರೂ ಬಿಡ್ತಿರ್ಲಿಲ್ಲ. ಪ್ರಸಂಗ ಮುಗಿದ ಮೇಲೆ ಅವಳು ಅವರನ್ನು ಹೊಗಳೂದು ಕೃತಜ್ಞತೆಯ ನೆವದಲ್ಲಿ ಅವಳ ಮೈ ಕೈ ಮುಟ್ಟಿ ಮಾತಾಡಿಸುದು ಎಲ್ಲ ಜಾಸ್ತಿ ಆಯ್ತು. ರಾಯರಿಗೆ ಇದನ್ನೆಲ್ಲ ನೋಡಿ ಅಸಹ್ಯ ಆಗ್ತಿತ್ತು. ಆದ್ರೆ ಯೆಂತ ಹೇಳುವ ಹಾಗೆ ಇರ್ಲಿಲ್ಲ. ಒಂದೆರಡು ಕಡೆ ಜೋಯಿಸ ಇದ್ರೆ ನಾನು ಬರೂದಿಲ್ಲ ಅಂದ್ರು. ಇದ್ರಿಂದಾಗಿ ರಾಯರು ಜೋಯಿಸರಿಗೆ ಹೆದರ್ತಾರೆ. ಅಂತ ಪುಕಾರು ಹಬ್ಬಿತು. ರಾಯರನ್ನು ಕರಿಯುವವರ ಸಂಖ್ಯೆ ಕಡಮೆ ಆಗಿ ಆದಾಯಕ್ಕೂ ಸಂಚಕಾರ ಬಂತು. ಜೋಯಿಸರು ಬಿಡ್ಲಿಲ್ಲ. ಉಷಾಳ ಮೇಲಿನ ಮೋಕೆಯಿಂದ ನಂಗೆ ಮಾರುತಿರಾಯರೇ ಬೇಕು ಅಂತ ಸಂಘಟಕರಿಗೆ ಹೇಳಿ ಹಾಕಿಸಿಕ್ಕೊಳ್ಳಿಕ್ಕೆ ಸುರು ಮಾಡಿದ್ರು.

ಹೀಗೆ ಉಷಾಳಿಗೂ ತ್ರಿವಿಕ್ರಮ ಜೋಯಿಸರಿಗೂ ಗೆಳೆತನ, ಮೋಕೆ ಬೆಳೆಯಿತು.

ಒಂದು ತಾಳಮದ್ದಳೆಯಲ್ಲಿ ಜೋಯಿಸರದ್ದು ಕರ್ಣ. ರಾಯರದ್ದು ಶಲ್ಯ. ಸರ್ಪಾಸ್ತ್ರ ಹೂಡಿದ ಕರ್ಣ 'ಏನು ಸಾರಥಿ ಸರಳು ಪಾಂಡವ ಸೇನೆಯ ಗೆಲಬಹುದೇ? ಪಾರ್ಥನ ಮಾನಿನಿಗೆ ವೈಧವ್ಯ ದೀಕ್ಷೆಯ ಕೊಡಬಹುದೇ?'